# ನನಸಾದ ಕನಸು

■ **ಪ್ರಕಾಶ ಎಸ್. ಮನ್ನಂಗಿ**
ಕಲೆ: ಸಂತೋಷ್ ಸಸಿಹಿತ್ಲು



ಅಂದು 1970ರ ಜನವರಿ ಎಂಟನೇ ತಾರೀಕು. ಅಮೆರಿಕದ ಡೆಟ್ರಾಯಿಟ್ ಮತ್ತು ನ್ಯೂ ಆರ್ಲಿಯನ್ಸ್ ತಂಡಗಳ ನಡುವೆ ಅಂತರರಾಷ್ಟ್ರೀಯ ಫುಟ್‌ಬಾಲ್ ಟೂರ್ನಮೆಂಟ್ ನಡೆದಿತ್ತು. ಆಟ ಮುಗಿಯಲು 11 ಸೆಕೆಂಡುಗಳಿದ್ದಾಗ ಡೆಟ್ರಾಯಿಟ್ ಒಂದು ಗೋಲನ್ನು ಹೊಡೆಯಿತು. ಇನ್ನೇನು ಅವರೇ ಗೆದ್ದು ಬಿಡುತ್ತಾರೆ ಎಂದು ಪ್ರೇಕ್ಷಕರು ಸಿಳ್ಳೆ, ಚಪ್ಪಾಳೆ ತಟ್ಟುತ್ತಿದ್ದರು. ಆಟ ಮುಗಿಯುವುದು 2 ಸೆಕೆಂಡು ಇದ್ದಾಗ ಮತ್ತೆ ಆಟಕ್ಕೆ ತಿರುವು ಸಿಕ್ಕಿತು. ಚೆಂಡು ನ್ಯೂ ಆರ್ಲಿಯನ್ಸ್ ತಂಡದ ಕೈಗೆ ಸಿಕ್ಕಿತು. ಆ ತಂಡದ ಆಟಗಾರ ಚೆಂಡನ್ನು ಗೋಲಿನತ್ತ ಜೋರಾಗಿ ಒದ್ದ. ಇದರಿಂದ ಎರಡು ದಾಖಲೆಗಳು ಹೊರಹೊಮ್ಮಿದವು. ಮೊದಲನೆಯದು ನ್ಯೂ ಆರ್ಲಿಯನ್ಸ್ ತಂಡ ಆಟದಲ್ಲಿ ಗೆಲುವು ಕಂಡಿದ್ದು. ಎರಡನೆಯದು ಚೆಂಡು ಒದ್ದ ಆ ಆಟಗಾರ ಡೆಂಪ್ಸಿ ಹೆಸರು ವಿಶ್ವ ವಿಖ್ಯಾತಿ ಪಡೆದುದು. ಅಲ್ಲಿಯವರೆಗೆ ಇದ್ದ ಚೆಂಡು ಒದ್ದ ವಿಶ್ವ ದಾಖಲೆ 51.2 ಮೀಟರ್. ಆದರೆ ಈಗ ಡೆಂಪ್ಸಿ ಒದ್ದದ್ದು 57.6 ಮೀಟರ್ ದೂರ, ಪ್ರೇಕ್ಷಕರು ಹುಚ್ಚೆದ್ದು ಕುಣಿದರು.

ಈ ದಾಖಲೆಯಲ್ಲೇನೂ ವಿಶೇಷತೆಯಿಲ್ಲ. ವಿಶೇಷತೆ ಇರುವುದು ಡೆಂಪ್ಸಿಯಲ್ಲಿ. ಏಕೆಂದರೆ ಆತನ ಬಲಗಾಲಿನ ಪಾದದಲ್ಲಿ ಬೆರಳುಗಳೇ ಇರಲಿಲ್ಲ. ಅದು ಅರ್ಧದಷ್ಟಿತ್ತು. ಇಷ್ಟೇ ಅಲ್ಲ ಅವನ ಬಲಗೈ ಮತ್ತು ತೋಳುಗಳು ಸೊಟ್ಟಗಿದ್ದವು. ಅವನೊಬ್ಬ ಅಂಗವಿಕಲ. ಆತ ಕಾಲಿನ ಪಾದಕ್ಕೆ ಅಗಲವಾದ ಶೂ ಧರಿಸಿದ್ದ. ಶಾಲೆಯಲ್ಲಿದ್ದಾಗ ಆತನನ್ನು ಯಾರೂ ಆಟಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ‘ಅಂಗವಿಕಲನಾಗಿರುವುದರಿಂದ ನಿನಗೆ ಆಟ ಆಡುವುದು ಸಾಧ್ಯವಿಲ್ಲ. ನೀನು ನಮ್ಮ ತಂಡಕ್ಕೆ ಬೇಡ’ ಎಂದು ಎಲ್ಲರೂ ಹೇಳುತ್ತಿದ್ದರು. ಆದರೆ ಡೆಂಪ್ಸಿಗೆ ಫುಟ್‌ಬಾಲ್ ಎಂದರೆ ಪಂಚಪ್ರಾಣ. ಈ ತಿರಸ್ಕಾರದಿಂದ ಆತ ಬೇಸರಗೊಳ್ಳಲಿಲ್ಲ. ಶಾಲೆಯ ಹೊರಗಡೆಯ ತಂಡಗಳಲ್ಲಿ ಆಡತೊಡಗಿದ. ಆನಂತರ ವೃತ್ತಿಪರ ಫುಟ್‌ಬಾಲ್ ಆಟಗಾರರ ತಂಡ ಸೇರಿದ. ದಿನದ ಹತ್ತು ತಾಸು ಆಟದ ಮೈದಾನದಲ್ಲಿ ಕಳೆಯತೊಡಗಿದ. ಎಲ್ಲರೂ ಅಚ್ಚರಿಗೊಳ್ಳುವಂತೆ ಫುಟ್‌ಬಾಲ್ ಆಡಲಾರಂಭಿಸಿದ. ಅವನನ್ನು ತಂಡಕ್ಕೆ ಸೇರಿಸಿಕೊಳ್ಳದೇ ತಪ್ಪು ಮಾಡಿದೆವೆಂದು ಶಾಲೆಯ ಸಹಪಾಠಿಗಳು ಅಂದುಕೊಳ್ಳುವಂತಾಯಿತು. ಆಡುತ್ತ, ಆಡುತ್ತ ಕೊನೆಗೆ ಈ ವಿಶ್ವ ದಾಖಲೆ ಸ್ಥಾಪಿಸಿಬಿಟ್ಟ.

ದ. ಕ್ಯಾಲಿಫೋರ್ನಿಯಾದಲ್ಲಿ 1947ರ ಜನವರಿ 12ರಂದು ಜನಿಸಿದ ಡೆಂಪ್ಸಿ ನಡೆದು ಬಂದ ಹಾದಿ ಕಠಿಣವಾಗಿತ್ತು. ಅದಕ್ಕಾಗಿ ಆತ ಶ್ರಮಿಸಿದ. 11 ಸೀಸನ್‌ಗಳಲ್ಲಿ 159 ಗೋಲುಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡ. ಆತ ವೇದಿಕೆಗಳಲ್ಲಿ ಹೇಳುತ್ತಿದ್ದ ಒಂದು ಮಾತೆಂದರೆ, ನನ್ನ ಸಾಮರ್ಥ್ಯದ ಬಗ್ಗೆ ಬಹಳಷ್ಟು ಮಂದಿಗೆ ಅಪನಂಬಿಕೆ ಇತ್ತು. ಆದರೆ ನನ್ನ ಮೇಲೆ ನನಗೆ ನಂಬಿಕೆ ಇತ್ತು. ಅದು ನನ್ನ ಶ್ರಮದೊಂದಿಗೆ ಸೇರಿಕೊಂಡಾಗ ಈ ಸಾಧನೆ ಸಾಧ್ಯವಾಯಿತು.

ಈಗ ನಾವು ಯೋಚಿಸಬೇಕು. ನಮಗೂ ಹಲವಾರು ಕನಸುಗಳಿವೆ. ಯಾರೋ ಋಣಾತ್ಮಕವಾಗಿ ಮಾತಾಡಿದ ಕೂಡಲೇ ನಾವು ನಮ್ಮ ಕನಸುಗಳಿಂದ ವಿಮುಖರಾಗುತ್ತೇವೆ. ನಾವು ಮತ್ತೆ ಪ್ರಯತ್ನ ಮಾಡುವುದೇ ಇಲ್ಲ. ನಮ್ಮ ಕನಸು, ಅದನ್ನು ಸಾಧಿಸುವ ದೃಢ ನಂಬಿಕೆ, ಪರಿಶ್ರಮ ಇದ್ದರೆ ನಾವೂ ಕನಸನ್ನು ನನಸು ಮಾಡಿಕೊಳ್ಳಬಹುದು ಅಲ್ಲವೇ? ■

# ಅಪ್ಪಿಯ ಆಸೆ

■ **ಬೀರಣ್ಣ ನಾಯಕ ಮೊಗಟಾ**
ಕಲೆ: ಸಂತೋಷ್ ಸಸಿಹಿತ್ಲು



ದಿನ ದಿನ ಕಳೆಯುವ
ಅಂದದಿ ಬೆಳೆಯುವ
ಅಪ್ಪಿಯ ಆಸೆಯು ಹೀಗಂತೆ
  ಚಂದಿರನಲ್ಲಿಗೆ
  ಹಾರುತ ಮೆಲ್ಲಗೆ
  ಆಟಕೆ ಕರೆದರೆ ಹೇಗಂತೆ!
ಚುಕ್ಕೆಯ ಕಂಡು
ಮಿನುಗುವ ದಂಡು
ಪೋಣಿಸಿ ದಂಡೆಯ ಮಾಡುವೆನು
  ಚಂದಿರ ನೋಡು
  ಮೋಲಕಿದೆ ಕೋಡು
  ಗೆಳೆಯರ ಕರೆದು ಆಡುವೆನು.

ಗುಡ್ಡವ ಏರುತ
ಕೈಯನು ಬಳಸುತ
ಹಕ್ಕಿಯ ಜೊತೆಯಲಿ ಹಾರೋಣ
  ಸಂದರ ಕಡಲು
  ಸಾಗರ ದೊಡಲು
  ಮೀನಿನ ಜೊತೆಯಲಿ ಈಜೋಣ
ಬೆಟ್ಟವ ಸುತ್ತುತ
ಮರಗಳ ಏರುತ
ಮಾಗಿದ ಹಣ್ಣನು ಸವಿಯೋಣ
  ಸ್ನೇಹದಿ ನಾವು
  ಪ್ರೀತಿಯ ಹೂವು
  ಎಲ್ಲರು ಸುಖದಿ ಬಾಳೋಣ ■